**ಸಿ. ಸಿ. ನಂ. 4408/2023**

**ಪಿ ಡಬ್ಲ್ಯೂ: 1**

**ಸಾಕ್ಷಿಯು ದಿನಾಂಕ:** 03-02-2025 **ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟಿ ಸವಾಲು: ಆರೋಪಿ ಪರ ಶ್ರೀ ಎಸ್ ಕೆ ಡಿ ಆರ್., ವಕೀಲರಿಂದ**

ಶಕುಂತಲಾ ರವರು ಪದ್ಮಾವತಿ ಗೋಲ್ಡ್ ಸೌಕ್ ಅಂಗಡಿಯ ಮಾಲೀಕರು ಎಂದು ತೋರಿಲಸು ದಾಖಲೆಯನ್ನು ಹಾಜರುಪಡಿಸಿಲ್ಲ. ಪದ್ಮಾವತಿ ಗೋಲ್ಡ್ ಸೌಕ್ ಅಂಗಡಿ **2018** ರಲ್ಲಿ ಪ್ರಾರಂಭವಾಗಿರುತ್ತದೆ. ಸದರಿ ಅಂಗಡಿ ಪ್ರಾರಂಭಿಸಿದ್ದರ ಬಗ್ಗೆ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಅಂದರೆ ಸರಿ. ಪದ್ಮಾವತಿ ಗೋಲ್ಡ್ ಸೌಕ್ ಅಂಗಡಿಯ ಲೆಡ್ಜರ್ ಗಳನ್ನು ಮತ್ತು ಇತರೆ ಪುಸ್ತಕಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ತೆರಿಗೆ ಪಾವತಿಸಿದ ಬಗ್ಗೆ ಫೈಲ್ ಮಾಡಿರುವ ರಿಟರ್ನ್ಸ್ ನಲ್ಲಿ ಆರೋಪಿಯಿಂದ ಬರತಕ್ಕಂತಹ ಹಣವನ್ನು ತೋರಿಸಿದ ಫೈಲ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆರೋಪಿಗೆ ಯಾವ ಯಾವ ಆಭರಣಗಳನ್ನು ಕೊಡಲಾಗಿದೆ ಎಂದು ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ಬಂಗಾರದ ವ್ಯವಹಾರದಲ್ಲಿ ನನಗೆ **15-20** ವರ್ಷಗಳ ಅನುಭವ ಇರುತ್ತದೆ. ಪಿರ್ಯಾದುದಾರರು ಪದ್ಮಾವತಿ ಗೋಲ್ಡ್ ಸೌಕ್ ಅಂಗಡಿ ತೆಗೆಯುವುದಕ್ಕೂ ಮೊದಲು ಗೃಹಿಣಿಯಾಗಿದ್ದರು. ಪದ್ಮಾವತಿ ಗೋಲ್ಡ್ ಸೌಕ್ ಅಂಗಡಿ ಇಡಲು ಯಾವ ಮೂಲದಿಂದ ಹಣ ತಂದಿರುತ್ತೇವೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿ. ದೂರಿನಲ್ಲಿ ಸದರಿ ಅಂಗಡಿ ಪ್ರಾರಂಭಿಸಲು ಯಾರು ಹಣ ನೀಡಿದ್ದರು ಮತ್ತು ಯಾರಿಂದ ಬಂಗಾರವನ್ನು ಖರೀದಿಸಿದ್ದೇವು ಎಂದು ನಮೂದು ಮಾಡಿಲ್ಲ ಅಂದರೆ ಸರಿ. ವಸ್ತಮಲ್ ಜೈನ್ ನಮ್ಮ ಸಮಾಜದವರು. ಸದರಿಯವರು ನನ್ನ ತಂದೆಗೆ ಪರಿಚಯ ಇರುತ್ತಾರೆ.

ಸದರಿಯವರು 10-12 ವರ್ಷಗಳಿಂದ ನನಗೆ ಪರಿಚಯ ಇರುತ್ತಾರೆ. ಸದರಿಯವರು ಚಿನ್ನದ ವ್ಯಾಪಾರ ಮಾಡುತ್ತಿರಬಹುದು. ನನ್ನ ತಂದೆ ಚಿನ್ನದ ಅಂಗಡಿಯಲ್ಲಿಯೇ ವ್ಯಾಪಾರ ನೋಡಿಕೊಳ್ಳುತ್ತಾರೆ. ನನ್ನ ತಂದೆ ಆ ರೀತಿ ಪದ್ಮಾವತಿ ಗೋಲ್ಡ್ ಸೌಕ್ ಅಂಗಡಿಯಲ್ಲಿಯೇ ವ್ಯಾಪಾರ ನೋಡಿಕೊಳ್ಳುತ್ತಾರೆ. ನಾನು ಸಹ ಅದೇ ಅಂಗಡಿಯಲ್ಲಿ ವ್ಯಾಪಾರ ನೋಡಿಕೊಳ್ಳುತ್ತೇವೆ. ನಾನು ಮಾರಾಟ ಮತ್ತು ಖರೀದಿಗಳನ್ನು ನೋಡಿಕೊಳ್ಳುತ್ತಿದ್ದು, ನನ್ನ ತಂದೆ ಮೇಲ್ವಿಚಾರಣೆ ಮಾಡುತ್ತಾರೆ.

ಆರೋಪಿ 10-15 ವರ್ಷಗಳಿಂದ ನಮಗೆ ಪರಿಚಯ ಇರುತ್ತಾರೆ. 2018 ರಿಂದ ಇಲ್ಲಿಯವರೆಗೂ ನನ್ನ ತಾಯಿ ಅಂಗಡಿಗೆ ಬಂದು ವ್ಯವಹಾರಗಳನ್ನು ನೋಡಿಕೊಳ್ಳುವುದಿಲ್ಲ ಅಂದರೆ ಸರಿಯಲ್ಲ. ನನ್ನ ತಾಯಿ ಅಂಗಡಿಗೆ ವ್ಯಾಪಾರ ಮಾಡಲು ಬರುವುದಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ಖರೀದಿ ಮತ್ತು ಮಾರಾಟವನ್ನು ನಾನೇ ನೋಡಿಕೊಳ್ಳುತ್ತೇನೆ ಎಂದು ನುಡಿಯುತ್ತಾರೆ. ಆರೋಪಿ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ವಸ್ತಮಲ್ ಜೈನ್ ರವರು ನನ್ನ ತಂದೆ ಅಥವಾ ತಾಯಿಯವರೊಂದಿಗೆ ವ್ಯವಹಾರ ಮಾಡಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಆರೋಪಿ ಈ ಪ್ರಕರಣದ ವ್ಯವಹಾರವೇ ನಮ್ಮ ಅಂಗಡಿಯಲ್ಲಿ ಮಾಡಿರುತ್ತಾರೆ. ಸಾಮಾನ್ಯವಾಗಿ ಗ್ರಾಹಕರಿಗೆ ಅವರು ಏನು ಕೆಲಸ ಮಾಡುತ್ತಾರೆ ಮತ್ತು ಎಲ್ಲಿ ವ್ಯವಹಾರಗಳನ್ನು ಮಾಡುತ್ತಾರೆ ಎಂದು ನಾವು ಕೇಳುತ್ತೇವೆ ಅಂದರೆ ಸರಿಯಲ್ಲ. ಆರೋಪಿ ಅಷ್ಟು ಬಂಗಾರದ ಆಭರಣಗಳನ್ನು ಯಾವ ಉದ್ದೇಶಕ್ಕಾಗಿ ಖರೀದಿಸುತ್ತಿದ್ದಾರೆ ಎಂದು ನಾನು ಕೇಳಿರುವುದಿಲ್ಲ.

ಆರೋಪಿ ಆಭರಣಗಳನ್ನು ಖರೀದಿಸಿದ್ದರು ಎನ್ನಲಾದಾಗ ಚಿನ್ನದ ಬೆಲೆ 10 ಗ್ರಾಂ ಗೆ ಅಂದಾಜು ಬೆಲೆ ರೂ. 55,000/- ಇದ್ದಿರಬಹುದು. ನಮ್ಮ ಅಂಗಡಿಗೆ ಬಂಗಾರದ ಆಭರಣಗಳನ್ನು ಮಾರಾಟ ಮಾಡುವ ಲೈಸೆನ್ಸ ಮಾತ್ರ ಇರುತ್ತದೆ.

ಗಿರವಿ ಅಂಗಡಿ ಲೈಸೆನ್ಸ್ ಇರುವುದಿಲ್ಲ. 2018 ರಿಂದ ಇಲ್ಲಿಯವರೆಗೆ ಸಂದಾಯ ಇಲ್ಲದೇ ಎಷ್ಟು ಗ್ರಾಹಕರಿಗೆ ಆಭರಣಗಳನ್ನು ಕೊಟ್ಟಿರುತ್ತೇವೆ ಎಂದು ಹೇಳಲು ಆಗುವುದಿಲ್ಲ. ಆ ರೀತಿ ಮುಂಗಡ ಸಂದಾಯ ಇಲ್ಲದೇ ಆಭರಣಗಳನ್ನು ಮಾರಾಟ ಮಾಡಿದ್ದರೆ ನಮ್ಮ ಅಂಗಡಿಯ ಪುಸ್ತಕದಲ್ಲಿ ನಮೂದು ಮಾಡಲಾಗುತ್ತದೆ. ಸಂದಾಯವಿಲ್ಲದೇ ಎಷ್ಟು ಬೆಲೆಯ ಆಭರಣಗಳನ್ನು ಕೊಡಬೇಕು ಎಂಬುದು ಗ್ರಾಹಕರ ಸಾಮರ್ಥ್ಯಕ್ಕೆ ಅನುಗುಣವಾಗಿ ನಿರ್ಧರಿಸಲಾಗುತ್ತದೆ. ನನ್ನ ತಂದೆ ತಾಯಿ ಬಂಗಾರದ ವ್ಯವಹಾರವನ್ನು ಯಾರೊಂದಿಗೆ ಮಾಡುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಯಾರಾದರೂ ಸಂದಾಯ ಮಾಡದೇ ಆಭರಣ ಖರೀದಿಸಿದ್ದರೆ ನಮ್ಮ ಪುಸ್ತಕಗಳಲ್ಲಿ ನಮೂದು ಮಾಡಲಾಗುತ್ತದೆ ಅಂದರೆ ಸರಿ. ಹಣ ಪಾವತಿಸಿದ ಬಗ್ಗೆಯೂ ಸದರಿ ಪುಸ್ತಕಗಳಲ್ಲಿ ಪ್ರತಿದಿನ ಬರೆಯಲಾಗುತ್ತದೆ ಅಂದರೆ ಸರಿ. ಇನವೆಂಟರಿ ಪುಸ್ತಕ, ಲೆಡ್ಜರ್ ಪುಸ್ತಕ ಮತ್ತು ತೆರಿಗೆ ಪಾವತಿಸಿದ ಬಗ್ಗೆ ರಿಟರ್ನಸ ಪೈಲ್ ನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಸಲು ನನಗೆ ತೊಂದರೆ ಇಲ್ಲ ಅಂದರೆ ಸರಿ. ದೂರನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ.

**ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.